**ಪಿ & . ಎಸ್ ಸಿ .ನಂ. 10/2017**
**ಆರ್ . ಡಬ್ಲ್ಯೂ:1**

**ಸಾಕ್ಷಿಯು ದಿನಾಂಕಃ** 19-11-2025 **ರಂದು ವಿಚಾರಣೆಗಾಗಿ ಹಾಜರಾಗಿದ್ದು, ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಎಸ್ ಎಂ ವಕೀಲರಿಂದ**

ದಿಃ **23-11-2017** ರ ದೃಢೀಕರಣ ಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಆರ್ಃ **1** ಎಂದು ಗುರುತಿಸಲಾಯಿತು. ದಿಃ **10-11-2017** ರ ಮಾಹಿತಿ ಹಕ್ಕು ಅಧಿನಿಯಮದ ಅಡಿ ಪಡೆಯಲಾದ ಮಾಹಿತಿ ಪತ್ರ ಹಾಜರುಪಡಿಸಿರುತ್ತೇನೆ. ಅದನ್ನು ನಿಆರ್ಃ **2** ಎಂದು ಗುರುತಿಸಲಾಯಿತು. ದಿಃ **27-07-2018** ರಂದು ಸಪ್ತಗಿರಿ ವಿದ್ಯಾ ಸಂಸ್ಥೆಯವರು ನೀಡಿರುವ ಪತ್ರದ ದೃಡೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಆರ್ಃ **3** ಎಂದು ಗುರುತಿಸಲಾಯಿತು. ದಿಃ **29-05-2018** ರ ದೃಢೀಕರಣ ಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಆರ್ಃ **4** ಎಂದು ಗುರುತಿಸಲಾಯಿತು. ದಿಃ **28-12-2016** ರ ಪತ್ರ ಮತ್ತು ಅದಕ್ಕೆ ಲಗತ್ತಿಸಿದ ಸೇವಾ ಪುಸ್ತಕದ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ಒಟ್ಟಾಗಿ ನಿಆರ್ಃ **5** ಎಂದು ಗುರುತಿಸಲಾಯಿತು. ದಿಃ **03-04-2018** ರಂದು ನನ್ನ ತಾಯಿ ಪೋಲಿಸ್ ವರಿಷ್ಠಾ ಅಧಿಕಾರಿಗಳಿಗೆ ದೂರನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಆರ್ಃ **6** ಎಂದು ಗುರುತಿಸಲಾಯಿತು. ದಿಃ **23-06-2017** ರಂದು ಉಪವಿಭಾಗಾಧಿಕಾರಿ ಟಿ ಬಿ ಡ್ಯಾಂ ರವರು ಹೊರಡಿಸಿರುವ ಆದೇಶ ಹಾಜರುಪಡಿಸಿರುತ್ತೇನೆ. ಅದನ್ನು ನಿಆರ್ಃ **7** ಎಂದು ಗುರುತಿಸಲಾಯಿತು. ಟಿ ಬಿ ಡ್ಯಾಂ ಪೋಲಿಸರು ನನ್ನ ತಾಯಿಗೆ ನೀಡಿರುವ ನೋಟಿಸ್ ಹಾಜರುಪಡಿಸಿರುತ್ತೇನೆ. ಅದನ್ನು ನಿಆರ್ಃ **8** ಎಂದು ಗುರುತಿಸಲಾಯಿತು. ನನ್ನ ತಾಯಿ ದಿಃ **03-06-2016** ರಂದು ನೀಡಿರುವ ಅರ್ಜಿಯ

ಸ್ವೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಆರ್ಃ **9** ಎಂದು ಗುರುತಿಸಲಾಯಿತು. ಪಿ **&** ಎಸ್ ಸಿ **1/2017** ರಲ್ಲಿನ ಅರ್ಜಿ ಆದೇಶ ಪುಟಗಳು ಮತ್ತು ಆದೇಶ ಹಾಜರುಪಡಿಸಿರುತ್ತೇನೆ. ಅವುಗಳನ್ನು ನಿಆರ್ಃ **10** ರಿಂದ **12** ಎಂದು ಗುರುತಿಸಲಾಯಿತು.

## ಪಾಟೀ ಸವಾಲು ಪ್ರತಿವಾದಿ ಪರ ವಕೀಲರಿಂದ

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀಸವಾಲಿಗಾಗಿ ಸಮಯಾವಕಾಶವನ್ನು ಕೇಳಿದ್ದು ನ್ಯಾಯದಾನದ ದೃಷ್ಟಿಯಿಂದ ಸಮಯಾವಕಾಶವನ್ನು ನೀಡಿ ಮುಂದೂಡಲಾಯಿತು.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೆ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.